# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1171** |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 15.03.2021 |
| ಉತ್ತರಿಸುವ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಮತ್ತು ಮೈಸೂರು ವಿಭಾಗದಲ್ಲಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರಾಗಿ ನೇಮಕಗೊಂಡು ಅದೇ ಹುದ್ದೆಯಲ್ಲಿ ಸುದೀರ್ಘವಾಗಿ 21 ವರ್ಷ ಸೇವೆ ಸಲ್ಲಿಸಿರುವವರಿಗೆ 20 ವರ್ಷದ ಒಂದು ಇಂಕ್ರಿಮೆಂಟ್‌ನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಗುಲ್ಬರ್ಗಾ ಮತ್ತು ಧಾರವಾಡ ವಿಭಾಗದಲ್ಲಿ ಸದರಿ ಇಂಕ್ರಿಮೆಂಟ್‌ನ್ನು ನೀಡಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ; | ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರು ಸದರಿ ವಿಭಾಗದಲ್ಲಿ ಮುಖ್ಯ ಶಿಕ್ಷಕರಾಗಿ ನೇಮಕಗೊಂಡು ಯಾವುದೇ ಬಡ್ತಿ ಇಲ್ಲದೆ ಒಂದೇ ಹುದ್ದೆಯಲ್ಲಿ 20 ವರ್ಷ ಸೇವೆ ಪೂರೈಸಿದ ಅರ್ಹತೆ ಹೊಂದಿದ ಮುಖ್ಯ ಶಿಕ್ಷಕರಿಗೆ 20 ವರ್ಷದ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಿರುತ್ತಾರೆ.<br>ಅಪರ ಆಯುಕ್ತರು, ಗುಲ್ಬರ್ಗ ಆಯುಕ್ತಾಲಯದಲ್ಲಿ 20 ವರ್ಷದ ಹೆಚ್ಚುವರಿ ವೇತನಬಡ್ತಿ ಮಂಜೂರು ಮಾಡಿರುವುದಿಲ್ಲ.<br>ಅಪರ ಆಯುಕ್ತರು, ಗುಲ್ಬರ್ಗ ಇವರು ಪ್ರಸ್ತುತ ಸದರಿ ಗ್ರೂಪ್ ಸದರಿ ಗ್ರೂಪ್-ಬಿ ವೃಂದದ ಅಧಿಕಾರಿಗಳು ಪರಿಷ್ಕೃತ ವೇತನ ಶ್ರೇಣಿ(48900-92700)ರಲ್ಲಿ ವೇತನ ಪಡೆಯುತ್ತಿದ್ದು, ಸದರಿ ವೇತನ ಶ್ರೇಣಿಯಲ್ಲಿ 1994/1999ನೇ ಸಾಲಿನಲ್ಲಿ ಪ್ರೋಬೇಷನರಿ ಮುಖ್ಯ ಶಿಕ್ಷಕರೆಂದು ನೇಮಕಾತಿ ಹೊಂದಿದ ಅಧಿಕಾರಿಗಳಿಗೆ, ಒಂದೇ ಹುದ್ದೆಯಲ್ಲಿ 20 ವರ್ಷಗಳ ಕಾಲ ಒಂದು ಹೆಚ್ಚುವರಿ ಪದೋನ್ನತಿ ಹೊಂದದೆ ಕಾರ್ಯ ನಿರ್ವಹಿಸಿದ್ದಕ್ಕಾಗಿ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಪರಿಷ್ಕೃತ ಶ್ರೇಣಿ 48900-92700ರಲ್ಲಿ ಮಂಜೂರು ಮಾಡುವ ಬಗ್ಗೆ ಪ್ರಸ್ತಾವನೆ ಬಂದಿದ್ದು, ಪರಿಶೀಲಿಸಲಾಗುತ್ತಿದೆ. |
| ಇ) | ಬಂದಿದ್ದಲ್ಲಿ, ಸದರಿಯವರಿಗೆ ಇಂಕ್ರಿಮೆಂಟ್ ನೀಡದಿರಲು ಕಾರಣಗಳೇನು; (ವಿವರ ನೀಡುವುದು) | ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಹುದ್ದೆಗಳಲ್ಲಿ ಸತತ 20 ವರ್ಷಗಳ ಸೇವೆಯನ್ನು ಯಾವುದೇ ಪದನ್ನೋತಿ ಪಡೆಯದೆ ಇರುವುದಿರಂದ ಪ್ರಸ್ತುತ 20 ವರ್ಷಗಳ ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಲು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 13 ಎಸ್‌ಆರ್‌ಪಿ 2002, ದಿನಾಂಕ:09/05/2002 ಸರ್ಕಾರದ ಆದೇಶದಲ್ಲಿ ಮಿತಿಗೊಳಿಸಿರುವ ವೇತನ ಶ್ರೇಣಿಗಳನ್ನು ಸದರಿ ಅಧಿಕಾರಿಗಳು |

| | | |
|---|---|---|
| | | ಮೀರಿರುತ್ತಾರೆ (ಪ್ರಸ್ತುತ 6ನೇ ವೇತನ ಆಯೋಗದ ಶಿಫಾರಸ್ಸಿನಂತೆ ಪರಿಷ್ಕೃತ ವೇತನ ಶ್ರೇಣಿ:48900-92700) ದಿನಾಂಕ:01/04/2022ರಂತೆ ಮುಖ್ಯ ಶಿಕ್ಷಕರ ವೇತನ ಶ್ರೇಣಿ 6000-11200 ಇದ್ದು ಸದರಿ ಆದೇಶದಲ್ಲಿ ತಿಳಿಸಿರುವ ವೇತನ ಶ್ರೇಣಿಯಾಗಿದ್ದು, ಸದರಿ ಆದೇಶದಲ್ಲಿನ ಕಂಡಿಕೆ 6(ii) ರಲ್ಲಿ ಈ ಆದೇಶಗಳು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಪ್ರಾಥಮಿಕ / ಪ್ರೌಢಶಾಲೆಗಳ ಎಲ್ಲಾ ವರ್ಗದ ಶಿಕ್ಷಕರಿಗೆ ಅನ್ವಯವಾಗತಕ್ಕದ್ದಲ್ಲ ಎಂದು ಆದೇಶದಲ್ಲಿರುತ್ತದೆ.<br><br>ಮುಖ್ಯ ಶಿಕ್ಷಕರು / ತತ್ಸಮಾನ ವೃಂದದ ನೇಮಕಾತಿ ಪ್ರಾಧಿಕಾರ ಆಯುಕ್ತರು ಆಗಿದ್ದು, ಇವರುಗಳಿಗೆ ವೇತನ ಶ್ರೇಣಿ ರೂ. 48900-92700ರಲ್ಲಿ 20 ವರ್ಷಗಳ ವೇತನ ಶ್ರೇಣಿಯನ್ನು ನೇಮಕಾತಿ ಪ್ರಾಧಿಕಾರಿಗಳು ಮಂಜೂರು ಮಾಡಲು ಸರ್ಕಾರದ ಆದೇಶಗಳಲ್ಲಿ ಅವಕಾಶವಿರುವುದಿಲ್ಲ. ಆದ್ದರಿಂದ ಸದರಿ ಅಧಿಕಾರಿಗಳಿಗೆ 20 ವರ್ಷಗಳ ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡುವ ಬಗ್ಗೆ ಆರ್ಥಿಕ ಇಲಾಖೆಯೊಡನೆದ ಸಮಾಲೋಚಿಸಲಾಗುತ್ತಿದೆ. |
| ಈ) | ಯಾವ ಕಾಲಮಿತಿಯಲ್ಲಿ ಸದರಿ ಇಂಕ್ರಿಮೆಂಟ್‌ನ್ನು ನೀಡಲಾಗುವುದು? | ಆರ್ಥಿಕ ಇಲಾಖೆಯ ಅಭಿಪ್ರಾಯ ಪಡೆದ ನಂತರ ಪರಿಶೀಲಿಸಿ ಕ್ರಮವಹಿಸಲಾಗುವುದು. |

ಸಂಖ್ಯೆ: ಇಪಿ 43 ಎಸ್‌ಓಹೆಚ್ 2021

(ಎಸ್. ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು